# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ/4150/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 29/08/2016

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಮಲಪ್ರಭ ಎಡದಂಡೆ ನಾಲೆಯ ಪ್ರಾರಂಭದಿಂದ ಕೊನೆಯ ಹಂತದವರೆಗೆ ಹಾಗೂ ಹಂಚು ನಾಲೆಗಳನ್ನು ಪರಿವೀಕ್ಷಿಸಿ,ನೀರು ಬಸಿಯುವಿಕೆಯ ಸ್ಥಳಗಳನ್ನು ಗುರುತಿಸಿ, ದುರಸ್ತಿ ಕ್ರಮಗಳನ್ನು ಜರುಗಿಸಿ ತಮ್ಮ ವರದಿ ನೀಡುವ ಬಗ್ಗೆ

---

ಶ್ರೀ ನಿಂಗನಗೌಡ ಶಿವನಗೌಡ ಚಿಕ್ಕೂರ ವಾಸ: ಎಂ. ಕಲ್ಲಾಪೂರ, ರಾಮದುರ್ಗ ತಾಲೂಕ್, ಬೆಳಗಾವಿ ಜಿಲ್ಲೆ, (ಇನ್ನು ಮುಂದೆ ಇವರನ್ನು ದೂರುದರರು ಎಂದು ಸಂಭೋದಿಸಲಾಗುವುದು) ಇವರಿಗೆ ರಾಮದುರ್ಗ ತಾಲೂಕಿನ, ಎಂ. ಕಲ್ಲಾಪೂರ ಗ್ರಾಮದ ವ್ಯಾಪ್ತಿಯಲ್ಲಿ ಸ.ನಂ.42ರಲ್ಲಿ ಜಮೀನಿದ್ದು, ಸದರಿ ಜಮೀನಿನ ಪಕ್ಕದಲ್ಲಿ ಮಲಪ್ರಭ ಎಡದಂಡೆ ನಾಲೆಯು ಹಾದು ಹೋಗಿರುತ್ತದೆ. ಸದರಿ ಕಾಲುವೆಯ ಕಾಮಗಾರಿಯು ಕಳಪೆಮಟ್ಟದ್ದಾಗಿದ್ದು, ಕಾಲುವೆಯಲ್ಲಿ ನೀರು ಹರಿಯುವಾಗ ನೀರು ಕಾಲುವೆಯಿಂದ ಬಸಿದು ದೂರುದಾರರ ಜಮೀನು ಹಾಗೂ ನಾಲೆಯ ಅಕ್ಕಪಕ್ಕದಲ್ಲಿರುವ ಎಲ್ಲಾ ಜಮೀನುಗಳು ಜವಳು ಭೂಮಿಯಾಗಿ ಮಾರ್ಪಟ್ಟು, ತಮ್ಮ ಜೀವನದ ಆಧಾರವೇ ಇಲ್ಲದಂತಾಗಿರುತ್ತದೆ. ಲೆಕ್ಕ ಶೀರ್ಷಿಕೆ 2701 ಸನ್ 2013–14ರ ಕಿ.ಮಿ. 74, 78, 79 ಮತ್ತು 80 ಕಿ.ಮೀ ರ ವರೆಗಿನ ನಾಲೆಯನ್ನು ರೀ–ಮಾಡಲಿಂಗ (ದುರಸ್ತಿ) ಕೆಲಸವನ್ನು ಮುಗಿಸಿ 4–5 ತಿಂಗಳಾಗಿದ್ದರೂ ಸಹ, ನವೆಂಬರ್ 7 ರಂದು ಕಾಲುವೆಯಿಂದ ನೀರು ಬಿಟ್ಟಾಗ, ನೀರು ತಮ್ಮ ಹೊಲಗಳಿಗೆ ನುಗ್ಗಿ, ಸುಮಾರು ರೂ.476.81 ಲಕ್ಷದಷ್ಟು ಹಣ ಖರ್ಚು ಮಾಡಿ, ದುರಸ್ತಿ ಮಾಡಿದ ಸದರಿ ಕಾಲುವೆಯ ಕಾಮಗಾರಿಯು ಕಳಪೆ ಮಟ್ಟದ್ದಾಗಿದ್ದರಿಂದ, ಈ ರೀತಿ ತಮ್ಮ ಜಮೀನುಗಳಿಗೆ ನೀರು ನುಗ್ಗಿ, ಜವಳು ಭೂಮಿಯಾಗಿರುತ್ತದೆಂದು ಕೊಟ್ಟ ದೂರಿನನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 9ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದೂರಿನ ತನಿಖೆ ಕೈಗೊಳ್ಳಲು ಆದೇಶಿಸಿರುತ್ತಾರೆ.

2. ಅದರಂತೆ, ದೂರಿನ ಪ್ರತಿಯನ್ನು ಕಳುಹಿಸಿ 1ನೇ ಎದುರುದಾರರಾದ ಶ್ರೀ ನಾಗನೂರ ಜಿ.ಬಿ., ನಿವೃತ್ತ ಸಹಾಯಕ ಕಾರ್ಯಪಾಲಕ, ದೊಡ್ಡ ನೀರಾವರಿ ವಿಭಾಗ, ಸಂಖ್ಯೆ.1, ರಾಮದುರ್ಗ ಇವರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಸದರಿಯವರು ತಮ್ಮ ಆಕ್ಷೇಪಣೆಯಲ್ಲಿ ತಾನು ನಿವೃತ್ತಿ ಹೊಂದುವ ಸಮಯದಲ್ಲಿ ಮಲಪ್ರಭ ಎಡದಂಡೆ ನಾಲೆಯ, ಎಂ. ಕಲ್ಲಾಪುರ ಗ್ರಾಮದ ದುರಸ್ತಿ ಕಾರ್ಯವನ್ನು ಶೇಕಡ 50 ರಷ್ಟು ಮಾತ್ರ ತಾನು ನಿರ್ವಹಿಸಿದ್ದು, ತಾನು ನಿವೃತ್ತಿ ಹೊಂದಿದ ಸಂದರ್ಭದಲ್ಲಿ ಸದರಿ ದುರಸ್ತಿ ಕಾಮಗಾರಿಯು ಮುಂದುವರೆದಿದ್ದು, ತಾವು ನಿರ್ವಹಿಸಿದ ಕಾಮಗಾರಿಯು ಯಾವುದೇ ರೀತಿಯ ಕಳಪೆಮಟ್ಟದ್ದಲ್ಲವೆಂದು, ಇದಕ್ಕೆ ಸಂಬಂಧಿಸಿದ ದಾಖಲೆಗಳು ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.1 ವಿಭಾಗದ ಕಾರ್ಯಪಾಲಕ ಅಭಿಯಂತರರವರ ಕಛೇರಿಯಲ್ಲಿ ಲಭ್ಯವಿರುತ್ತದೆಂದು ತಿಳಿಸಿರುತ್ತಾರೆ. ಸದರಿ ಎದುರುದಾರರು ಸಲ್ಲಿಸಿದ ಆಕ್ಷೇಪಣೆಯನ್ನು ಪರಿಗಣಿಸಿ, ಮಲಪ್ರಭ ಎಡದಂಡೆ ನಾಲೆಯ 77 ಕಿ.ಮೀ ಇಂದ 80 ಕಿ.ಮೀ. ವರೆಗಿನ ಕಾಮಗಾರಿಯನ್ನು ನಿರ್ವಹಿಸಿದ ಅಭಿಯಂತರರ ಹೆಸರು ಮತ್ತು ಹಾಲಿ ವಿಳಾಸವನ್ನು ಪಡೆಯಲು ಕ್ರಮ ಜರುಗಿಸಲಾಗಿದ್ದು, ಅದರಂತೆ ಕಾರ್ಯಪಾಲಕ ಅಭಿಯಂತರರು. ಮಲಪ್ರಭ ಎಡದಂಡೆ ನಾಲೆ, ವಿಭಾಗ ನಂ.1, ರಾಮದುರ್ಗ ಇವರು 77 ರಿಂದ 80 ಕಿ.ಮೀ. ವರೆಗಿನ ಕಾಮಗಾರಿಯನ್ನು ನಿರ್ವಹಿಸಿದ ಅಭಿಯಂತರರ ಹೆಸರುಗಳನ್ನು ನೀಡಿದ್ದು, ಅವರುಗಳೆಂದರೆ ಶ್ರೀ ಮಂಜುನಾಥ್ ಎಂ.ಜೆ., ಕಿರಿಯ ಅಭಿಯಂತರರು, ಶ್ರೀ ಪಿ.ಇ. ನಾಗರಾಜ್, ಸಹಾಯಕ ಅಭಿಯಂತರರು, ಶ್ರೀ ದಂಡಂಬಳಿಕರ, ಕಿರಿಯ ಇಂಜಿನಿಯರ್, ಸದರಿ ಅಭಿಯಂತರರುಗಳನ್ನು 2ರಿಂದ 4ನೇ ಎದುರುದಾರರೆಂದು ಗೌರವಾನ್ವಿತ ಉಪಲೋಕಾಯುಕ್ತ ರವರ ಆದೇಶದ ಮೇರೆಗೆ ಪರಿಗಣಿಸಿ ಅವರುಗಳಿಂದ ದೂರಿನಂಶಗಳಿಗೆ ಆಕ್ಷೇಪಣೆಯನ್ನು ಕರೆಯಲಾಗಿತ್ತು. ಎದುರುದಾರರಾದ 2 ರಿಂದ 4ನೇ ಎದುರುದಾರರುಗಳು ತಮ್ಮ ಆಕ್ಷೇಪಣೆಯಲ್ಲಿ ಮಲಪ್ರಭ ಎಡದಂಡೆ ನಾಲೆಯ ಕಾಮಗಾರಿಯನ್ನು ಅಂದಾಜು ಪಟ್ಟಿ, ಟೆಂಡರ್ ಅಗ್ರೀಮೆಂಟ್ ಪ್ರಕಾರ ಹಾಗೂ ಮೇಲಧಿಕಾರಿಗಳ ಸೂಚನೆಯಂತೆ ಕಾಲಕಾಲಕ್ಕೆ ಕಾಮಗಾರಿ ನಿರ್ವಹಿಸಲಾಗಿದ್ದು, ಕಾಲುವೆಯ ದುರಸ್ತಿಯಲ್ಲಿ ನಾಲೆಯ ಕೆಳಭಾಗ ಮತ್ತು ಅಕ್ಕಪಕ್ಕದ ಗೋಡೆಗಳನ್ನು ಎಂ.15 ಗುಣಮಟ್ಟದ ಕಾಂಕ್ರೀಟನ್ನು ಉಪಯೋಗಿಸಿ ಲೈನಿಂಗ್ ಮಾಡಲಾಗಿರುತ್ತದೆ. ಈ ರೀತಿಯ ಎಂ.15 ಕಾಂಕ್ರೀಟ ಲೈನಿಂಗ್ ಅನ್ನು ಟೆಕ್ನಿಕಲ್ ಅಡ್ವೈಸರಿ ಕಮಿಟಿ ಅವರು ನೀಡಿದ ಸಲಹೆಯಂತೆ ನಿರ್ವಹಿಸಲಾಗಿರುತ್ತದೆ. ಇದರಿಂದ, ಬಹುತೇಕ ನೀರು ಬಸಿಯುವಿಕೆಯು ನಿಂತಿರುತ್ತದೆಂದು, ಆದ್ದರಿಂದ, ತಮ್ಮ ಮೇಲಿನ ಈ ಪ್ರಕರಣವನ್ನು ಕೈಬಿಡಬೇಕೆಂದು ವಿನಂತಿಸಿರುತ್ತಾರೆ.

3. ಆದರೆ, ದೂರಿನಂಶಗಳನ್ನು, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಮತ್ತು ದಾಖಲಾತಿಗಳನ್ನು ಪರಿಶೀಲಿಸಿದ್ದಲ್ಲಿ, ದಿನಾಂಕ 7/11/2014 ರಂದು ದುರಸ್ತಿ ಕಾರ್ಯದ ನಂತರ ನೀರನ್ನು ಮಲಪ್ರಭ ಎಡದಂಡೆ ನಾಲೆಯಲ್ಲಿ ಹರಿಸಿದ್ದು, ಆ ದಿನ ಸಹ ಎಡದಂಡೆ ನಾಲೆಯ ಕಿ.ಮಿ.77 ರಿಂದ 80 ರ ಅಂತರದಲ್ಲಿರುವ ನಾಲೆಯಲ್ಲಿ ನೀರು ಬಸಿದು ದೂರುದಾರರು ಹಾಗೂ ಅವರ ಅಕ್ಕಪಕ್ಕದ ಜಮೀನುಗಳಲ್ಲಿ ನೀರು ನಿಂತಿರುವುದು ದೂರುದಾರರು ಹಾಜರುಪಡಿಸಿರುವ ಛಾಯಾಚಿತ್ರಗಳಿಂದ ಸ್ಪಷ್ಟಪಡುತ್ತದೆ. 20 ದಿನಗಳಲ್ಲಿ ಬಿಟ್ಟ ನೀರು ಈ ರೀತಿ ಭೂಮಿಯಲ್ಲಿ ಬಸಿದು ದೂರುದಾರರ ಜಮೀನಿನಲ್ಲಿ ಪೂರ್ತಿ ನೀರು ತುಂಬಿರುವುದು ಕಂಡುಬರುತ್ತದೆ. ಇದರಿಂದ ಎದುರುದಾರರು ನಿರ್ವಹಿಸಿರುವ ಕಾಮಗಾರಿಯು ಗುಣಮಟ್ಟದಲ್ಲವೆಂದು ಸ್ಪಷ್ಟಪಡುತ್ತದೆ. ಇದಲ್ಲದೆ, 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಕೃಷಿ ತಜ್ಞರು ವರದಿಯನ್ನು ನೀಡಿರುವ ಬಗ್ಗೆ ಉಲ್ಲೇಖಿಸಿದ್ದು, ಸದರಿ ಕೃಷಿ ತಜ್ಞರ ವರದಿಯನ್ನು ಉಪಲೋಕ್/ಬಿಜಿಎಂ/3474/2015 ರ ಪ್ರಕರಣದಲ್ಲಿ ಹಾಜರುಪಡಿಸಲಾಗಿದ್ದು, ಸದರಿ ವರದಿಯನ್ನು ಪರಿಶೀಲಿಸಿದ್ದಲ್ಲಿ, ತಜ್ಞರು “These lands are not permanently waterlogged. However, when water starts flowing in the canal, till water stops flowing, the seepage water from the canal enters the agricultural lands and makes the land temporary/seasonal (perched) water logging. After conducting survey and after discussion with the farmers the water logged area list has been prepared and it has been enclosed with this report.

Village-wise water-logged list:

1) M. Kallapur – 19.28 acres

2)M.Khanapur – 17.2 acres

3)Mudakavi – 7.16 acres

Total :43.76 acres

In the affected area, there is no choice or selection of crop, because of water-logged condition; farmers have been forced to take

sugarcane only. Further, farmers are getting about 40-60 % of normal yield. They are losing about 50% of yield.

Conclusion: After visiting the site, discussion with the farmers and obtaining sample analysis report, the following conclusions have been drawn:

1) There is seepage at some stretches of the MLBC and at some distributaries at the CH From 76-80 kms;
2) The problem is relatively more, when canal runs at high elevation and when runs on embankment. Further seepage was also observed in the distributaries, which have not been repaired and not maintained.
3) After remodeling of the canal, the seepage rate was reduced but it is still there.

Affected area may not be classified as water-logged or saline. However, when water starts flowing in the canal immediately water starts seeping in the fields. It makes the soil wet and creates temporarily water logging condition. Some extent it hampers the agriculture operations, it also restricts the crop choice for sowing to the farmers and reduces the crop yield. The Farmers ......................."

ಎಂದು ವರದಿ ನೀಡಿರುವುದು ಸ್ಪಷ್ಟಪಟ್ಟಿರುತ್ತದೆ. ಸದರಿ ವರದಿಯಲ್ಲೂ ಸಹ ರೀ-ಮಾಡಲಿಂಗ್ (ದುರಸ್ತಿ) ಕಾಮಗಾರಿಯ ನಂತರವೂ ಸಹ ನಾಲೆಯಿಂದ ನೀರು ಬಸಿದು ಅಕ್ಕಪಕ್ಕದ ಜಮೀನುಗಳಲ್ಲಿ ನೀರು ನಿಂತು ತಾತ್ಕಾಲಿಕವಾಗಿ ಭೂಮಿ ಜವಳಾಗುವುದೆಂದು ಸ್ಪಷ್ಟಪಟ್ಟಿರುತ್ತದೆ. ಇದರಿಂದ, ಬೆಳೆಯಲ್ಲಿ ಶೇಕಡ 50 ರಷ್ಟು ಇಳುವರಿ ಕುಂಟಿತವಾಗುತ್ತದೆಂದು, ಇದರಿಂದ ಆ ಭಾಗದ ಕೃಷಿಕರಿಗೆ ನಷ್ಟ ಉಂಟಾಗುತ್ತಿದೆ ಎಂದು ಸ್ಪಷ್ಟಪಡುತ್ತದೆ.

4. ಈ ಮೇಲಿನ ಅಂಶಗಳನ್ನು ಪರಿಶೀಲಿಸಿದ್ದಲ್ಲಿ, ಮಲಪ್ರಭ ಎಡದಂಡೆ ನಾಲೆಯ ಹಾಗೂ ಹಂಚು ನಾಲೆಗಳಲ್ಲಿ ಹಲವಾರು ಭಾಗಗಳಲ್ಲಿ ನೀರು ಬಸಿದು ಅಕ್ಕಪಕ್ಕದ ಜಮೀನುಗಳಲ್ಲಿ ನೀರು ನಿಂತು

ತಾತ್ಕಾಲಿಕವಾಗಿ ಸದರಿ ಜಮೀನುಗಳ ಜವಳಾಗುತ್ತಿರುವುದು ದೃಢಪಟ್ಟಿದ್ದು. ಇದರಿಂದ ಆ ಭಾಗದ ಜನರಿಗೆ ಬೆಳೆಯುವ ಬೆಳೆಯಲ್ಲಿ ಶೇ:50 ರಷ್ಟು ಬೆಳೆ ಕುಂಟಿತವಾಗಿ ನಷ್ಟವಾಗುತ್ತಿರುತ್ತದೆ.

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ (ಮಲಪ್ರಭ ಎಡದಂಡೆ ನಾಲೆಯ ಪ್ರಾರಂಭದಿಂದ ಕೊನೆಯ ಹಂತದವರೆಗೆ ಹಾಗೂ ಹಂಚು ನಾಲೆಗಳನ್ನು ಪರಿವೀಕ್ಷಿಸಿ, ನೀರು ಬಸಿಯುವಿಕೆಯ ಸ್ಥಳಗಳನ್ನು ಗುರುತಿಸಿ, 6 ತಿಂಗಳೊಳಗಾಗಿ ದುರಸ್ತಿ ಕ್ರಮ ಜರುಗಿಸುವಂತೆ) ಮಾನ್ಯ ಸರ್ಕಾರಕ್ಕೆ ಈ ಮೂಲಕ (ಶಿಫಾರಸ್ಸು ಮಾಡಿಲಾಗಿದೆ.) ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Ananda 2/8

(ನ್ಯಾಯಮೂರ್ತಿ ಎನ್. ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.